ಆ) ಸರ್ವೆ ಮುಗಿಯದಿದ್ದಲ್ಲಿ, ಯಾವಾಗ ಸರ್ವೆ ಪೂರ್ಣ ಮಾಡಲಾಗುವುದು;

ಇ) ಸರ್ವೆ ಕಾರ್ಯ ಮುಗಿದಿದ್ದಲ್ಲಿ ಕೆಲಸವನ್ನು ಪ್ರಾರಂಭ ಮಾಡದಿರಲು ಕಾರಣವೇನು;

ಈ) ಇದು ಯಾವ ಹಂತದಲ್ಲಿದೆ, ಯಾವಾಗ ಕೆಲಸ ಪ್ರಾರಂಭಿಸಲಾಗುವುದು ?

ಡಾ।। ಆರ್.ಬಿ. ಚೌಧುರಿ (ಸಣ್ಣ ನೀರಾವರಿ ರಾಜ್ಯ ಸಚಿವರು):–

ಅ) ಮುಗಿದಿದೆ.

ಆ) ಉದ್ಭವಿಸುವುದಿಲ್ಲ.

ಇ) ಮತ್ತು ಈ) ಈ ಯೋಜನೆಯ ಪ್ರಾಥಮಿಕ ವರದಿಯನ್ನು ಕಾವೇರಿ ಜಲಾನಯನ ಪ್ರತ ನೀರಾವರಿ ನಿಗಮವು ತಯಾರಿಸಿದ್ದು ಈ ಯೋಜನೆಗೆ ಬೇಕಾಗುವ ನೀರೆತ್ತುವ ಪರವಾನಗಿ ಕೊಡುವ ಬಗ್ಗೆ ಪರಿಶೀಲಿಸಲಾಗುತ್ತಿದೆ. ನೀರಿನ ಪರವಾನಿಗೆ ದೊರೆತ ನಂತರ ಮತ್ತು ಆರ್ಥಿಕ ಸಂಸ್ಥೆಯಿಂದ ಸಾಲ ಸೌಲಭ್ಯ ದೊರೆತ ನಂತರ ಯೋಜನೆಯ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಹೇಮಾವತಿ ನಾಲೆಯ ಹಣದ ಅವ್ಯವಹಾರ

1178 (1768): ಶ್ರೀ ಎನ್. ರುದ್ರಪ್ಪ (ತುರುವೇಕೆರೆ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೇಮಾವತಿ ನಾಲೆಯ ಎನ್.ಬಿ.ಸಿ. 35 ಕಿ.ಮೀ.ನಿಂದ 45 ಕಿ.ಮೀ.ವರೆಗೆ ಸರಿಯಾಗಿ ಕೆಲಸವಾಗದೆ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಬಂದಿದ್ದರೆ, ಈ ಬಗ್ಗೆ ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಇಲ್ಲ.

ಆ) ಪ್ರಶ್ನೆ (ಅ) ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಹೇಮಾವತಿ ನಾಲೆಗೆ ಸಂಬಂಧಿಸಿದ ಸಾಮಗ್ರಿಗಳನ್ನು ಕೊಳ್ಳುವಲ್ಲಿ ಅವ್ಯವಹಾರ

1179 (1769): ಶ್ರೀ ಎನ್. ರುದ್ರಪ್ಪ (ತುರುವೇಕೆರೆ):–

ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ತುರುವೇಕೆರೆ ಹೇಮಾವತಿ ನಾಲೆಯ ಎಕ್ಸಿಕ್ಯೂಟಿವ್ ಇಂಜಿನಿಯರ್ ವಿಭಾಗದಲ್ಲಿ ಸಾಮಗ್ರಿಗಳನ್ನು ಕೊಳ್ಳುವುದರಲ್ಲಿ ದುರುಪಯೋಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಕಳೆದ ಮೂರು ವರ್ಷಗಳಿಂದ ಕೊಂಡಿರುವ ಸಾಮಗ್ರಿಗಳಾವುವು;

ಇ) ಸಾಮಗ್ರಿಗಳನ್ನು ಕೊಳ್ಳಲು ಖರ್ಚು ಮಾಡಿರುವ ಹಣವೆಷ್ಟು ?

ಶ್ರೀ ಎಸ್. ಎಂ. ಕೃಷ್ಣ (ಉಪಮುಖ್ಯಮಂತ್ರಿಗಳು):–

ಅ) ಬಂದಿಲ್ಲ.

ಆ) ಅಡಕದಲ್ಲಿ ವಿವರಗಳನ್ನು ಒದಗಿಸಲಾಗಿದೆ.

ಇ) ಅಡಕದಲ್ಲಿ ವಿವರಗಳನ್ನು ಒದಗಿಸಲಾಗಿದೆ.

ಪ್ರಶ್ನೆ ಸಂಖ್ಯೆ: 1769ರ (ಅ) ಗೆ ಉತ್ತರಗಳು:-

ಕಳೆದ ಮೂರು ವರ್ಷಗಳಿಂದ (1990-91, 1991-92 ಮತ್ತು 1992-93) ಕೊಂಡಿರುವ ಸಾಮಗ್ರಿಗಳ ವಿವರ.

1. ಸಿಮೆಂಟ್
2. ಟಾರ್ ಸ್ಟೀಲ್
3. ಎಕ್ಸ್‌ಪ್ಲೋಸೀವ್ಸ್
4. ಹ್ಯೂಮ್ ಪೈಪ್
5. ಎಮ್.ಎಸ್. ಸೆಂಟರಿಂಗ್ ಶೀಟ್
6. ಉಡನ್ ಫ್ಲಾಂಕ್ಸ್
7. ಕಾಂಕ್ರೀಟ್ ಮಿಕ್ಸರ್
8. ಎಕ್ಸ್‌ಪ್ಯಾನ್‌ಷನ್ ಜಾಯಿಂಟ್ಸ್
9. ವೈಬರೇಟರ್ಸ್ ಫ್ಲಾಟ್ಸ್ ಕಾಂಪ್ಯಾಕ್ಟರ್
10. ಹ್ಯಾಂಡ್ ಆಪರೇಟರ್ ಕಾಂಕ್ರೀಟ್ ಮಿಕ್ಸರ್
11. ನೀರಿನ ತೊಟ್ಟಿ
12. ವೈಬರೇಟರ್ ನೀಡಲ್
13. ಪಿವಿಸಿ ವಾಟರ್ ಸ್ಟಾಪರ್
14. ಡೀವಾಟರಿಂಗ್ (ಎಲೆಕ್ಟ್ರಿಕ್) ಪಂಪ್ಸ್ (ಡೀವಾಟರಿಂಗ್ ಟನಲ್ ಸೀಪೇಜ್ ಅಟ್ ಎಕ್ಸಿಟ್ ಪೋರ್ಟಲ್)

ಪ್ರಶ್ನೆ ಸಂಖ್ಯೆ: 1769ರ (ಇ) ಗೆ ಉತ್ತರಗಳು:-

ಸಾಮಗ್ರಿಗಳನ್ನು ಕೊಳ್ಳಲು ಖರ್ಚು ಮಾಡಿರುವ ಹಣದ ವಿವರ

ಕ್ರ. ಸಂ.	ಸಾಮಗ್ರಿಗಳ ಹೆಸರು	1990-91	1991-92	1992-93
	ಸ್ಟಾಕ್:-			
1.	ಸಿಮೆಂಟ್	30,17,890-00	29,87,774-00	75,41,982-00
2.	ಸ್ಟೀಲ್	8,91,111-00	22,37,419-00	33,36,461-00
3.	ಎಕ್ಸ್‌ಪ್ಲೋಸೀವ್ಸ್	-	5,49,361-00	51,75,794-00
4.	ಆರ್‌ಸಿಸಿ ಹ್ಯೂಮ್ ಪೈಪ್	2,67,376-00	4,24,733-00	2,17,949-00
5.	ವಾಟರ್ ಸಪ್ಲೈ ಮೆಟೀರಿಯಲ್ಸ್	58,376-00	57,499-00	-

6. ಮಿಸಲೇನಿಯಸ್ ಐಟಮ್ಸ್	3,58,204-00	6,67,105-00	11,93,009-00
ಮೊತ್ತ	45,92,957-00	69,23,891-00	1,74,65,195-00
ಟೂಲ್ಸ್ ಮತ್ತು ಪ್ಲಾಂಟ್ಸ್:-			
1. ಯಂತ್ರೋಪಕರಣ	1,41,724-00	43,184-00	9,67,135-00
2. ಕಾಂಕ್ರೀಟ್ ಮಿಕ್ಸರ್	1,06,958-00	2,13,625-00	2,66,295-00
3. ಸೆಂಟರಿಂಗ್ ಶೀಟ್ಸ್	2,77,928-00	2,61,238-00	9,02,260-00
4. ವೈಬರೇಟರ್ ಮತ್ತು ನೀಡಲ್	1,11,695-00	78,873-00	1,16,207-00
5. ಮಿಸಲೇನಿಯಸ್ ಐಟಮ್ಸ್	1,11,022-00	1,75,823-00	59,480-00
ಮೊತ್ತ	7,49,327-00	7,72,743-00	23,11,377-00

ರಾಷ್ಟ್ರೀಯ ಹೆದ್ದಾರಿಗಳ ಅಕ್ಕಪಕ್ಕ ಕಟ್ಟಡಗಳ ನಿರ್ಮಾಣ

1180 (2041): ಶ್ರೀ ಸಿ. ಎಂ. ಲಿಂಗಪ್ಪ (ರಾಮನಗರ):-

ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಷ್ಟ್ರೀಯ ಹೆದ್ದಾರಿ ರಾಜ್ಯದ ಮತ್ತು ಇತರೆ ಜಿಲ್ಲಾ ಹೆದ್ದಾರಿಗಳಲ್ಲಿ ಖಾಸಗಿಯವರು ರಸ್ತೆ ಮಧ್ಯದಿಂದ ಎಷ್ಟು ಅಡಿಗಳ ಅಂತರವನ್ನು ಬಿಟ್ಟು ಕಾಂಪೌಂಡ್, ಕಟ್ಟಡ ಇತ್ಯಾದಿ ಖಾಯಂ ನಿರ್ಮಾಣಗಳನ್ನು ಮಾಡಬಹುದು; (ಪ್ರತಿಯೊಂದು ವರ್ಗದ ರಸ್ತೆಗೂ ಪ್ರತ್ಯೇಕ ವಿವರ ನೀಡುವುದು);

ಆ) ಯಾವ ಕಾನೂನಿನಡಿಯಲ್ಲಿ ರಸ್ತೆ ಬದಿಯ ನಿರ್ಮಾಣಗಳನ್ನು ನಿರ್ಬಂಧಿಸಲಾಗಿದೆ;

ಇ) ಈ ಕಾನೂನನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗುತ್ತಿದೆಯೇ; ಹಾಗಿದ್ದಲ್ಲಿ ಎಷ್ಟು ಪ್ರಕರಣಗಳಲ್ಲಿ ಕಟ್ಟುನಿಟ್ಟಿನ ಕ್ರಮಗಳನ್ನು ಜರುಗಿಸಲಾಗಿದೆ; (ವಿವರ ಕೊಡುವುದು);

ಈ) ಇತ್ತೀಚಿನ ದಿನಗಳಲ್ಲಿ ಹೆದ್ದಾರಿ ಬದಿಯಲ್ಲಿನ ಖಾಸಗಿ ಜಮೀನಿನ ಮಾಲೀಕರು ತಮಗಿಷ್ಟ ಬಂದ ಅಂತರವನ್ನು ಬಿಟ್ಟು ಕಾಂಪೌಂಡ್, ಮತ್ತಿತರ ಶಾಶ್ವತ ಕಟ್ಟಡಗಳ ನಿರ್ಮಾಣಗಳನ್ನು ರಾತ್ರೋರಾತ್ರಿ ನಿರ್ಮಾಣ ಮಾಡುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ ?

ಶ್ರೀ ಕೆ. ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):-

ಅ) ರಸ್ತೆಯ ಮಧ್ಯಭಾಗದಿಂದ ಕಟ್ಟಡದ ರೇಖೆಗೆ ಈ ಕೆಳಕಂಡಂತೆ ಅಂತರವಿರಬೇಕು.

ರಾಷ್ಟ್ರೀಯ ಹೆದ್ದಾರಿ	– 40 ಮೀ.
ರಾಜ್ಯ ಹೆದ್ದಾರಿ	– 40 ಮೀ.
ಮುಖ್ಯ ಜಿಲ್ಲಾ ರಸ್ತೆ	– 25 ಮೀ.

ಹಾಗೂ ಪಟ್ಟಣ ಪ್ರದೇಶ, ಕೈಗಾರಿಕಾ ಪ್ರದೇಶಗಳಲ್ಲಿ ರಾಷ್ಟ್ರೀಯ ಹೆದ್ದಾರಿಗೆ